UNIVERSAL
LIBRARY
OU_200854
UNIVERSAL
LIBRARY

[Reprint from *Karnataka Granthamala.*]

# GOLDSMITH'S

# THE HERMIT

*(IN KANNADA VERSE)*

Checked 1969

# ಪ್ರೋಷಿತ

# ಪ್ರಿಯಸಮಾಗಮ

BY

S. G. NARASIMHACHAR

MYSORE
THE G.T.A. PRESS
1911

# ಪ್ರವೇಶ

ಕರ್ಣಾಟಕ ಕವಿಯೆಂದು ಪ್ರಸಿದ್ಧವಡೆದ ಎಸ್. ಜಿ. ನರಸಿಂಹಾಚಾರ್ಯರಿಂದ ರಚಿತವಾದ ಈ ಸಣ್ಣ ಕಾವ್ಯವು ಗೋಲ್ಡ್ ಸ್ಮಿತ್ ಎಂಬ ಹೂಣಕವಿಶ್ರೇಷ್ಠನ ದಿ. ಹರ್ಮಿಟ್ ಎಂಬುದರ ಪದ್ಯಾನುವಾದವು. ಇದೊಂದು ಶೃಂಗಾರರಸ ಪ್ರಧಾನವಾದ ರಮಣೀಯವಾದ ಕಾವ್ಯವು.

# ಕಥಾಂಶ.

---

ಒಬ್ಬ ಧನಿಕನಿಗೆ ಒಬ್ಬಳೇ ಮಗಳಿದ್ದಳು. ಆಕೆಗೂ ಮತ್ತೊಬ್ಬ ತರುಣನಿಗೂ ಪರಸ್ಪರಾನುರಾಗವು ಉಂಟಾಗಿದ್ದಿತು. ಆದರೂ ಆಕೆಯು ಧನಮದದಿಂದಲೋ ಅಥವಾ ಸ್ತ್ರೀಜನ ಸಹಜವಾದ ಚಾಂಚಲ್ಯದಿಂದಲೋ ಆತನನ್ನು ಧಿಕ್ಕರಿಸಿದಳು. ಆತನು ಮನೋವ್ಯಥೆಯಿಂದ ವನಪ್ರವೇಶಮಾಡಿ ಋಷಿಚರ್ಯೆಯಲ್ಲಿ ಇರುತ್ತಿದ್ದನು. ಬಳಿಕ ಆಕೆಗೆ ಪಶ್ಚಾತ್ತಾಪವುಂಟಾಗಿ ಆತನನ್ನು ವರಿಸಬೇಕೆಂದು ಎಲ್ಲೆಲ್ಲಿ ಹುಡುಕಿದರೂ ಕಾಣದೆ ಪುರುಷವೇಷವನ್ನವಲಂಬಿಸಿ ಅರಣ್ಯದಲ್ಲಿ ಹುಡುಕುತ್ತಾ ಇರುವಲ್ಲಿ, ಒಂದು ದಿವಸ ಸಂಧ್ಯಾಕಾಲದಲ್ಲಿ ಈ ವಿರಹಿಗಳಿಬ್ಬರೂ ಸಂಧಿಸಿದರು. ವೇಷಾಂತರದಲ್ಲಿದ್ದ ಕಾರಣದಿಂದ ಇಬ್ಬರಿಗೂ ಗುರುತು ತಿಳಿಯಲಿಲ್ಲ. ಆ ಕಾಲದಲ್ಲಿ ಆಕೆಯು ಆತನನ್ನು ನೋಡಿ ಇಂತೆಂದಳು :—

# ಪ್ರೋಷಿತ ಪ್ರಿಯಾಗಮಾಗಮಂ

ಕರುಣಾಳೂ ವನವಾಸೀ ।
ತಿರುಗ್ಗೆ ಯುಮಿ ತಿರಿವೆನೊರ್ವನೆನ್ನಂ ಕೊಂಡಾ ॥
ಕಿರಣದೆ ಬನಮಂ ಬೆಳಗುತೆ ।
ಪರಹಿತಕೆನೆ ಮಿರುಪ ಸೊಡರ ಬಳಿಗೊಡವೋಗ್ಗೆ ॥೧॥

ಆರುಮೊಡನಿಲ್ಲವಕ್ಕಟ ।
ದಾರಿಯುನರಿಯೆಂ ಬಳಲ್ದು ಮೆಲ್ಲನದೆನಿತಂ ॥
ದೂರಮನೈದುವೆನನಿತುಮ ।
ಪಾರಮೆನಿಪ್ಪಡವಿ ಬಳೆವ ತೆರದಿಂ ತೋರ್ಕುಂ ॥೨॥

ಎನೆ ಮುನಿ ನುಡಿಗುಂ:—ಮಾಣೆಲೆ ।
ತನಯಾ ಕಳ್ತಲೆಯುಪಾಯುಕರಮೈದದಿರ್ಕೈ ॥
ಮಿನುಗುವ ಟಕ್ಕಿನ ಸೊಡರದು ।
ಕೊನೆಗಾಣಿಸಲೆಂದು ನಿನ್ನನಿಂತೆಳೆದೊಯ್ಗುಂ ॥೩॥

ಮನೆಯಿಲ್ಲದಲೆವ ಜನಕದೆ ।
ಮನೆ ಯುದರ ಕವಾಟವಾಗಳುಂ ತೆರೆದಿರ್ಕುಂ ॥
ಎನಗಿರ್ಪ ವಸ್ತು ಕಡುಕಿರಿ ।
ದೆನಿಸಿದೊಡಂ ಪ್ರೀತಿಯಿಂದಮಾನದನೀವೆಂ ॥೪॥

ಅದರಿಂದೆ ತಿರುಗು, ರಾತ್ರಿಯು ।
ನದರೊಳ್ಕಳೆ ನನ್ನ ಕುಟಿಯೊಳಿರ್ಪುದನೆನ್ನೊಳ್ ।
ಪುದುವೆನೆಕೊಳ್ಪಣ್ಣಣಿಸಂ ।
ಮೊದೆವಾಸಂ ನಿದ್ರೆಯುಂ ಮದೀಯಾಶಿಷಮುಂ ॥೫॥

ಮನವೊಸೆದಂತಿರೆ ತಪ್ಪಲ ।
ಬನದೊಳ್ಸಂಚರಿಪ ಮೃಗಮನೆಂದುಂ ಕೊಲ್ಲೆಂ ।
ಎನಗೆ ದಯೆದೋರ್ವ ಜಗದೀ ।
ಶನೊಳಾಂ ಕಲ್ತವರೊಳಿಂತು ಕರುಣಮನಾಂಪೆಂ ॥೬॥

ಗಿರಿತಟವನದಿಂ ತರ್ಪೆಂ ।
ಪರಿಪೂತಂ ಪಾಪದೂರಮೆನಿಪೊಳ್ಳುಣಿಸಂ ॥
ಪರಿಪಕ್ವಫಲದೆ ಕಂದದೆ ।
ತುರುಗಿದ ಕರಡಿಗೆಯನಮಳಜಲಮುಂ ಝರದಿಂ ॥೭॥

ತಿರುಗದರಿಂದೆಲೆ ಚಿತ್ತದ ।
ಮರುಕಮನುಳಿಯಿಹದ ಚಿಂತೆಯೇ ದೋಷಕರಂ ॥
ನರನಿಲ್ಲಿ ಬಯಸುವುದೆ ಕಡು ।
ಕಿರಿದಾಕಿರಿದುಮನನಲ್ಪಕಾಲಂ ಬಯಸಂ ॥೮॥

ಎನೆ ನುಡಿದ ಮುನಿಯ ನುಡಿ ಮಂ ।
ಜಿನ ಪನಿ ಪನಿವಂತೆ ಮೆಲ್ಲನೊಳವುಗೆ ಕಿವಿಯಂ ॥
ವಿನಮಿತಶಿರನಾಪಾಂಥಂ ।
ಮುನಿಪನ ಬೆಂಬಳಿಯೊಳವನ ಕುಟಿಗೊಡವೋದಂ ॥೯॥

ದೂರದೊಳಾರುಂ ಕಾಣದ ।
ಹೇರಡವಿಯೊಳಿರ್ಕುವೊಂದೆ ಕುಟಿಯದು ನೆರೆಯಾ ॥
ಊರ ಬಡವರ್ಗೆ ಗೇಹಂ ।
ದಾರಿಯನರಿಯದೆ ತೊಳಲ್ವ ಪಥಿಕರ ಶರಣಂ ॥೧೦॥

ಕಳದಂತೆ ಕಾಪಿಡಲ್ತ ।
ನ್ನೊಳಗೊಂದುಂ ವಸ್ತುವಿಲ್ಲವೆನಿಪಾಕುಟಿಯಂ ॥
ತೊಲಗಿಸಿ ಬಾಗಿಲ್ದಟ್ಟಿಯ ।
ನೊಳವೊಕ್ಕರ್ ಸಾಧುವೃತ್ತರಿರ್ಪರುವಾಗಳ್ ॥೧೧॥

ಕೆಲಸಂಗಳನುಳಿದು ಜನಂ ।
ನಿಲಯಕೆ ವಿಶ್ರಾಂತಿಗೆಂದು ಬರ್ಪಿರುಳೊಳವಂ ॥
ಜ್ವಲಿಯಿಸುತೆ ಹಸಂತಿಕೆಯುಂ ।
ನಲವಡಿಸಿದನತಿಥಿಯುಂ ವಿಷಣ್ಣನನಾಗಳ್ ॥೧೨॥

ಪಳಮನುಣಲಿಕ್ಕಿದಂ ನಗೆ ।
ಕೆಳೆಗೊಳೆ ಸವಿನೋಡೆನುತ್ತುಮಡಿಗಡಿಗೊರೆದಂ ॥
ಪಳೆಯ ಕತೆಗಳನೆ ಪೇಳುತೆ ।
ಕಳೆದಂ ನಿಡುವೊಳ್ತನಾಕಥಾಗಮನಿಪುಣಂ ॥೧೩॥

ನಲವಂ ತಾನುಂ ತಳೆದಂ ।
ತೆಳವೆಕ್ಕೆಸಗುಗುಮನೇಕವಿಧಚೇಷ್ಟೆಗಳಂ ॥
ಉಲಿಗುಂ ಝಿಲ್ಲಿಗಳೊಲೆಯೊಳ್ ।
ಜ್ವಲಿಕುಂ ಚಟಚಟನೆ ಪುಳ್ಳಿಗಳ್ಪಾರುತ್ತುಂ ॥೧೪॥

ಇನಿತರೊಳೊಂದುಂ ಪಾಂಥನ ।
ಮನದಳಲಂ ಕಳೆದು ನಲವನೆಸಗಿದುದಿಲ್ಲಂ ॥
ಘನಶೋಕಭರದೊಳಾತನ ।
ಕೊನೆಗಣ್ಣಿಂದಶ್ರುಧಾರೆ ಸುರಿದತ್ತಾಗಳ್ ॥೧೫॥

ಅಂತುಬರ್ಪವಳಲನೀಕ್ಷಿಸಿ ।
ಚಿಂತಿಸಿ ಬಗೆಗರಗಿ ಮುನಿಪನವನಂ ಕೇಳ್ಗುಂ ॥
ಎಂತೆಲೆ ಚಿಂತಾಕುಲ ನಿನ ।
ಗೆಂತೆತ್ತಣಿನಾಯ್ತುಬಗೆಯೊಳಿನಿತುಂ ದುಗುಡಂ? ॥೧೬॥

ಕರುಮಾಡದಿಂದೆ ತೊಲಗಿಸೆ ।
ಮರುಕದೆ ಬಗೆಗೊಳ್ಳದಿಲ್ಲಿ ತಿರಿವೆಯೊ ಮಿತ್ರರ್ ॥
ನೆರೆ ವಿಮುಖರಾಗಲಳ್ವೆಯೊ? ।
ತರುಣೀಜನಮೊಲಿಯದಿರ್ದೊಡೇಂ ಶೋಕಿಪೆಯೋ?॥೧೭॥

ಸಿರಿಗಳ್ವೆಯಪ್ಪೊಡಕ್ಕಟ ।
ಸಿರಿಯಿಂ ದೊರೆಕೊಳ್ವ ಸೌಖ್ಯಮಲ್ಪಂ ಕ್ಷಯಿಕುಂ ॥
ದೊರೆಕೊಳ್ವೀಯಲ್ಪಮುಮಂ ।
ಪಿರಿದೆಂದೆನೆ ಬಗೆವರಲ್ಪತರರದರಿಂದಂ ॥೧೮॥

ಪರಿಕಿಸೆ ಕೆಳೆತನಮಾವುದೊ ।
ಪುರುಳಿಲ್ಲದ ಮಾತು ಮರವೆಗೊಳಿಪ ಕುಮಂತ್ರಂ ॥
ಸಿರಿಯುಂ ಜಸಮುಂ ಬಿಡದನು ।
ಸರಿಪ ನೆಳಲ್ ಶೋಕಬೀಜಮುಡುಗಿದ ಪದದೊಳ್ ॥೧೯॥

ಒಲವುಂ ಬರಿನುಡಿ ಕೆಳೆಯಿಂ ।
ದೆ ಲಘುತರಂ ಸತಿಯರೀಗಡಿನ ಪರಿಹಾಸಂ ॥
ನೆಲದೊಳದೆತ್ತಂ ದೊರೆಯದು ।
ಪಲವೇಂ? ದೊರೆದಂದು ದೊರೆಗುಮೆಣೆವಕ್ಕಿಗಳೊಳ್ ॥೨೦॥

ಎಲೆ ಮರುಳೆ ಲಜ್ಜೆಯಾಗದೊ ।
ತೊಲಗಿಸು ನಿನ್ನಳಲನೊದೆದು ಕಳೆ ಪೆಂಡಿರನೆಂ ॥
ದುಲಿಯೆ ಮುನಿ ; ಪಥಿಕವದನದೆ ।
ತಲೆದೋರಿದ ಕೆಂಪು ವಿರಹಮುಂ ಸೂಚಿಸುಗುಂ ॥೨೧॥

ಪಿರಿದುಂ ವಿಸ್ಮಯದಿಂ ಮುನಿ ।
ನಿರುಕಿಸಿದಂ ನವನವೋನ್ಮಿಷತ್ಸುಭಗತೆಯುಂ ॥
ಅರುಣೋದಯದಾಕಾಶದ ।
ಸಿರಿವೊಲ್ಪೊಳೆದಪುದನಂತೆ ಮೆಯ್ಗೆರೆದಪುದಂ ॥೨೨॥

ಮುರಿದಿಟ್ಟಿಯೊರ್ಮೆ ಮೇಣ್ ।
ಬ್ಬುರಿಪೆರ್ದೆಯುಮದೊರ್ಕೆ ಮನದ ಭಯಮುಂ ತಾಂ ಬಿ ॥
ತ್ತರಿಸೆ ಸೊಬಗಾಂತ ಪಾಂಥಂ ।
ತರುಣಿಯ ಕಡುಚೆಲ್ವುವೆತ್ತ ರೂಪಂ ಮೆರೆಗುಂ ॥೨೩॥

ಬಳಿಕೊರೆಗುಂ:—" ಕ್ಷಮಿಸ್ನೈ ಧೃ ।
ಷ್ಟಳನಶರಣೆಯಂ ಜಗತ್ಪಿತಂಗಂ ನಿನಗಂ ॥
ನಿಳಯಮೆನಿಪ್ಪೀಯಾಶ್ರಮ ।
ದೊಳವೊಕ್ಕನುವಳಿಯಲಿಂತು ಪೊಲೆಗಲಸಿದಳಂ ॥೨೪॥

" ಕರುಣಿಂದಳೆ ಕನ್ಯಕೆಯೊಳ್ ।
ಪಿರಿದಪ್ಪನುರಾಗದಿಂ ತೊಳಲ್ವಳೊಳೆತ್ತಂ ॥
ಅರಸಿದೊಡಂ ಸುಖವೊಂದದೆ ।
ನಿರಾಶೆಂಗೊಳ್ಕೂಡಿ ಬಟ್ಟಿನಡೆವಳೊಳೆನ್ನೊಳ್ ॥೨೫॥

" ಸಿಂಧುವ ತೀರದೊಳೆಮ್ಮಯ ।
ತಂದೆವಿರಿರ್ದರ್ ಮಹಾಧನಾಢ್ಯರ್ ಪ್ರಭುಗಳ್ ॥
ತಂದೆಗಳ ಬಸಿರೊಳೊರ್ವಳೆ ।
ಬಂದುದರಿಂದೆನ್ನದಾದುದಾಸಿರಿಯನಿತುಂ ॥೨೬॥

" ನಡೆಪಿದ ತಂದೆಯಿನೆನ್ನಂ ।
ಪಡೆಯಲ್ವಂದರ್ ಪಲಂಬರವರೊಳ್ಕೆಲರಾಂ ॥
ಪಡೆಯದ ಚೆಲ್ವಂ ಪೊಗಳ್ದರ್ ।
ಬಿಡದೊಲ್ದರ್ ಪಲವರರೆಬರೊಲ್ದವೊಲಿರ್ದರ್ ॥೨೭॥

" ಪಿರಿದುಂ ಧನಮಿತ್ತೆನ್ನಂ ।
ವರಿಸಲ್ಕೆನೆ ಗಳಿಗೆಗೊರ್ವರ್ತೈದಿದರವರೊಳ್ ॥
ತರುಣಂ ಬರ್ಕುಮದೊರ್ವಂ ।
ತಿರಮಂ ಬಾಗಿಸುಗುಮೊಲ್ದುಮೆರೆಯದೆನಿಲ್ಕುಂ ॥೨೮॥

" ಸಿರಿಯುಂ ಪ್ರಭುತೆಯುಮಿಲ್ಲದೆ ।
ಬರಿದಂ ಬೆಳ್ಳುಡೆಯನಾಂತನಾದೊಡಮವನೊಳ್ ॥
ನೆರೆದತ್ತರಿವುಂ ತಕ್ಕುಮ ।
ವೆರಡಂ ಸರ್ವಸ್ವಮೆಂದು ನಾಂ ಬಗೆದಿರ್ದೆಂ ॥೨೯॥

" ಉಪವನದೆಡೆಗಳೊಳವನೆ ।
ನ್ನ ಪಕ್ಕದೊಳಗೊಲ್ತೈವಾಡುಪಾಡುವ ಪದದೊಳ್ ॥
ಉಪವನದೆಲರಾತನ ಸು ।
ಯ್ಯ ಪರಿಮಳಂಬಡೆಗುಮಡವಿ ನುಣ್ಗೊರಲಿಂಪಂ ॥೩೦॥

" ರವಿಯುದಯದಲರ್ವ ಸುಮಮುಂ ।
ಪ್ರವಿಮಳಮೆನೆ ಗಗನದಿಂದೆ ಸೂಸುವ ಹಿಮಮುಂ ॥
ಆವನ ಹೃದಯಕ್ಕೆ ದೊರೆಯೆನಿ ।
ಸುವನಿತು ವಿಮಲತೆಯನೆಂದುಮೇಂ ತೋರುಗುಮೇ ॥೩೧॥

" ಹಿಮಮುಂ ತರುವೊಳ್ವಿಕಸಿಪ ।
ಸುಮಮುಂ ಚಿರಶೋಭಿಯಾಗವವರಂತವನೊಳ್ ॥
ಸಮನಿಸಿದುದು ಸೊಬಗೆನ್ನೊಳ್ ।
ಸಮನಿಸಿತವರೊಂದು ಚಂಚಲತೆಯೆಂಬ ಗುಣಂ ||೩೨||

" ಅರಿದುಮುವಂ ಕಣ್ಸೋಲ್ತುದ ।
ಸುರುಗರ್ವದೆ ಬೀಗಿಯುಕಟ! ಪಲವುಂ ಪರಿಯಿಂ ॥
ಮರುಗಿಸಿದೆಂ ಮೇಣಾತನ ।
ಮರುಕದೊಳೆರ್ದೆಗರಗದ್ದೈದೆ ನಲವಾಂತಿರ್ದೆಂ ||೩೩||

" ಕಡುನೊಂದು ತನ್ನ ಗರ್ವದ ।
ಪಿಡುನುಡಿಯಿಂ ತೊರೆದು ಸನ್ನನವನೊರ್ವನೆ ಕಾ ॥
ಡೆಡೆಗೆ ನಡೆದಾರುಮಡಿಯಿಡ ।
ಡೆಡೆಯೊಳ್ತನ್ನೊಡಲನಕಟ! ನೀಗಿದನಕ್ಕುಂ ||೩೪||

" ಎನತೆ ಅಳಲೆನತೆ ದೋಷಂ ।
ತನುವಿರ್ಪಿನಮಿದರ ಕೈಪೆಯುಂ ನಾನುಣ್ಬೆಂ ॥
ಮನದಿನಿಯುನೊಡಲ ನೀಗಿದ ।
ವನದೆಡೆಯುಂ ಪೊರ್ದಿ ನೀಗಿದಪೆನೀತನುವಂ ||೩೫||

'' ಪರಿಜನಮನುಳಿದುಮುಳಿಪಂ ।
ತೊರೆದುಂ ಪ್ಯೈಗರೆದುಮಲ್ಲಿ ನೀಗುವೆನೊಡಲಂ ।
ಪೆರತೇಂ ಮದರ್ಘಮವನಂ ।
ದಂ ತಿರೆಗೈದಂತರ್ಘಮನಾನಂತುಟೆ ಗೈವೆಂ'' ॥೩೬॥

ಅಂತಾಗದಿರ್ಕೆನುತ್ತುಂ ।
ಕಾಂತೆಯು ನುಗ್ಗೊರಲನಪ್ಪಿದಂ ಮುನಿ ಸತಿಯುಂ ॥
ಅಂತನುಚಿತಮಂ ಗೈದವ ।
ನಂ ತಿಟ್ಟಿಲ್ ತಿರುಗಿ ಕಂಡಳಿನಿಯನನವನಂ ॥೩೭॥

'' ತಿರುಗು ಮನಃಪ್ರಿಯೆ ಮನ್ನೇ ।
ತ್ರರಸಾಯನೆ ನಿರುಕಿಸೆಲಗೆ ನಿನ್ನವನಂ ಮುಂ ॥
ಪಿರಿದಿರ್ದನನಿನ್ನೆವರಂ ।
ಮರಳ್ದಂ ನಿನ್ನೊಲ್ಮೆಗಿಂದು ಸಂದನನೆನ್ನಂ ॥೩೮॥

'' ಎನ್ನಯ ಸರ್ವಸ್ವಮೆ ಎಲೆ ।
ಎನ್ನಯ ಜೀವಿತಮೆ ಪಿರಿಯುದೆಂದುಂ ನಿಲ್ವಂ ॥
ತೆನ್ನೆರ್ದೆಯೊಳ್ ತಳ್ಕೈಸುತೆ ।
ನಿನ್ನಂ ನಾಂ ದುಃಖಮೆಲ್ಲಮಂ ಮರೆದಪ್ಪೆಂ ॥೩೯॥

" ಇನ್ನೀಗಳಿಗೆಯೆ ಮೊದಲಿನೆ ।
ಮುನ್ನೆಂದುಂ ಪಿರಿಯುದೊಲ್ದನಾವೊಡವಾಳ್ವಂ ॥
ನಿನ್ನೆರ್ದೆಯುನೊಡೆವ ಸುಯ್ಗಳ್ ।
ನಿನ್ನಯ ಮನದನ್ನನೆರ್ದೆಯುಮಂ ಭೇದಿಸುಗಂ "  ॥೪೦॥

ಇಂತಿರಲಾ ಗೋಲ್ಡ್‌ಸ್ಮಿತ್‌ಕವಿ ।
ಮುಂತೊರಿದಿರ್ದೊಂದು ಕಿರಿಯ ಕೃತಿಗಿದು ನೆಳಲೆಂ ॥
ಬಂತಿರೆ ರಚಿಸಿದೆನೀಕೃತಿ ।
ಸಂತಸಮಂ ಕುಡುವುದಕ್ಕೆ ಕನ್ನಡಿಗರ್ಗಂ  ॥೪೧॥